# ಕಾಳಾವರ ವರದರಾಜ ಶೆಟ್ಟಿ ಸರಕಾರಿ ಕಾಲೇಜು: ಎನ್ನೆಸ್ಸೆಸ್ ಶಿಬಿರ



**ಕೋಟೇಶ್ವರ,ಮಾ. 24:** ಸಮಯ ಪಾಲನೆ, ಶಿಸ್ತು, ಶ್ರಮದ ಮಹತ್ವ ನಾಯಕತ್ವ ಗುಣ ಬೆಳೆಸಿಕೊಳ್ಳುವಿಕೆ ಈ ಎಲ್ಲ ಅಂಶಗಳ ಮಹತ್ವ ತಿಳಿಸಿಕೊಡುವ ಮೂಲಕ ಎನ್ನೆಸ್ಸೆಸ್‌ನ ಸ್ವಯಂಸೇವಕರು, ವಿದ್ಯಾರ್ಥಿಗಳ ನಡುವಿನಲ್ಲಿ ವಿಶಿಷ್ಟ ಸ್ಥಾನ ಪಡೆಯುತ್ತಾರೆ ಎಂದು ಖ್ಯಾತ ಸಾಹಿತಿ, ಹಾಗೂ ಶಿಕ್ಷಣ ಸಂಯೋಜಕ ಸತ್ಯನಾ ಕೊಡೇರಿ ಇವರು ಹೇಳಿದರು.

ಶಿಬಿರ ಉದ್ಘಾಟಿಸಿದ ನಿವೃತ್ತ ಪ್ರಾಧ್ಯಾಪಕ, ಹಿರಿಯ ಶಿಕ್ಷಣ ತಜ್ಞ ಕೊಡೇರಿ ವಾಸುದೇವ ಕಾರಂತ ಮಾತನಾಡಿ ಇಲ್ಲಿ ತಾವು ಗಳಿಸಿದ ಅನುಭವಗಳನ್ನು ಭವಿಷ್ಯತ್ತಿನ ದಿನಗಳಲ್ಲಿ ಅಳವಡಿಸಿ ಕೊಳ್ಳಬೇಕು ಎಂದರು.

ಪ್ರಾಂಶುಪಾಲ ಡಾ। ರಾಜೇಂದ್ರ ಎಸ್. ನಾಯಕ ಅಧ್ಯಕ್ಷತೆ ವಹಿಸಿ ವಿದ್ಯಾರ್ಥಿಗಳು ಪಠ್ಯ ಪುಸ್ತಕದಿಂದಾಚೆ ಬದುಕುವ ಕಲೆ ಕಲಿಸುವ ಒಂದು ಮಹತ್ತರ ಯೋಜನೆ ರಾಷ್ಟ್ರೀಯ ಸೇವಾ ಯೋಜನೆ. ಇಲ್ಲಿ ಶ್ರಮಿಸಿದ ಸ್ವಯಂಸೇವಕರು ಸಮಾಜದ ಉನ್ನತ ಸ್ತರಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ. ಆದುದರಿಂದ ಇಂತಹ ಶಿಬಿರಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವುದರಿಂದ ತಮ್ಮ ವ್ಯಕ್ತಿತ್ವ ನಿರ್ಮಾಣ ಮಾಡಲು ಸಾಧ್ಯ ಎಂದರು.

ಆನಂದ ಪೂಜಾರಿ, ಅಧ್ಯಕ್ಷರು, ಹಳೆ ವಿದ್ಯಾರ್ಥಿ ಸಂಘ, ಸ.ಹಿ.ಪ್ರಾ ಶಾಲೆ ಕೊಡೇರಿ , ಸದಸ್ಯರು ಗ್ರಾ. ಪಂ. ಕೊಡೇರಿ, ಶ್ರೀ ಚೆನ್ನಕೇಶವ ಕಾರಂತ, ಗೌರವಾಧ್ಯಕ್ಷರು, ಹಳೆವಿದ್ಯಾರ್ಥಿ ಸಂಘ, ಸ.ಹಿ.ಪ್ರಾ. ಶಾಲೆ ಕೊಡೇರಿ; ಸುರೇಶ ಎಚ್ ಖಾರ್ವಿ, ಅಧ್ಯಕ್ಷರು, ಎಸ್.ಡಿ.ಎಂ.ಸಿ. ಸ.ಹಿ.ಪ್ರಾ. ಶಾಲೆ ಕೊಡೇರಿ; ಶ್ಯಾಮಲಾ, ಮುಖ್ಯೋಪಾಧ್ಯಾಯರು, ಸ.ಹಿ.ಪ್ರಾ. ಶಾಲೆ ಕೊಡೇರಿ; ರಾಷ್ಟ್ರೀಯ ಸೇವಾ ಯೋಜನಾ ಘಟಕ 2ರ ಕಾರ್ಯಕ್ರಮಾಧಿಕಾರಿ ಸುಚಿತ್ರಾ, ಐಕ್ಯೂಎಸಿ ಸಂಚಾಲಕ ನಾಗರಾಜ ಯು., ವಿದ್ಯಾರ್ಥಿ ನಾಯಕರಾದ ಐಶಿಕ್, ಗೌತಮಿ ಇದ್ದರು. ಸ್ವಯಂ ಸೇವಕಿಯರಾದ ಪವಿತ್ರಾ ಮತ್ತು ತಂಡದವರು ಪ್ರಾರ್ಥಿಸಿದರು. ರಾ.ಸೇ. ಯೋ. ಘಟಕ 1 ರ ಕಾರ್ಯಕ್ರಮಾಧಿಕಾರಿ ಸಂತೋಷ ನಾಯ್ಕ ಎಚ್ ಸ್ವಾಗತಿಸಿ, ಪ್ರಾಸ್ತಾವಿಸಿದರು. ನಾಗರಾಜ ವೈದ್ಯ ಎಂ. ನಿರೂಪಿಸಿ, ಸ್ವಯಂಸೇವಕಿ ಗೌತಮಿ ವಂದಿಸಿದರು.

Scanned By Camera Scanner